ಕೂಲಿಗಾಗಿ ಕಾಳು ಯೋಜನೆ

64 (635) ಶ್ರೀ ಸಂಪಂಗಿ ಎನ್ (ಬಾಗೇಪಲ್ಲಿ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ 3 ವರ್ಷಗಳಿಂದಲೂ ಕೂಲಿಗಾಗಿ ಕಾಳುಯೋಜನೆಯಡಿಯಲ್ಲಿ ಎಷ್ಟು ಜನರಿಗೆ ಉದ್ಯೋಗವನ್ನು ಒದಗಿಸಲಾಗಿದೆ ಇದಕ್ಕೆ ತಗಲಿರುವ ಅನುದಾನವೇನು?

ಆ) ಯಾವ ಯಾವ ಗ್ರಾಮಗಳಲ್ಲಿ ಅಭಿವೃದ್ದಿ ಕಾಮಗಾರಿಗಳನ್ನು ಈ ಯೋಜನೆಯಡಿಯಲ್ಲಿ ಕೈಗೊಂಡು ಪೂರೈಸಲಾಗಿದೆ ವಿವರಗಳನ್ನು ಒದಗಿಸುವುದು?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು)

ಅ) ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ 3 ವರ್ಷಗಳಿಂದ ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ 2,32 339 ಜನರಿಗೆ ಉದ್ಯೋಗ ಒದಗಿಸಲಾಗಿದೆ ಇದಕ್ಕೆ ತಗಲಿರುವ ಅನುದಾನ ರೂ 3,44,54,959 00

ಆ) ವಿವರಗಳು ಜಿಲ್ಲಾಧಿಕಾರಿಗಳು ಕೋಲಾರ ಜಿಲ್ಲೆರವರ ಕಛೇರಿಯಲ್ಲಿ ಲಭ್ಯವಿರುತ್ತವೆ

ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಅನಧಿಕೃತ ಸರ್ಕಾರಿ ಜಮೀನು ಸಕ್ರಮಗೊಳಿಸುವಿಕೆ

450 (370) ಶ್ರೀ ಹೆಚ್ ಎಂ ಚಂದ್ರಶೇಖರಪ್ಪ (ಶಿವಮೊಗ್ಗ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸಕ್ರಮಕ್ಕೆ ಕೋರಿ ಬಂದಿರುವ ಅನಧಿಕೃತ ಸರ್ಕಾರಿ ಜಮೀನು ಸಾಗುವಳಿ ಅರ್ಜಿಗಳ ಸಂಖ್ಯೆ ಎಷ್ಟು ಈ ಪೈಕಿ ಎಷ್ಟು ಎಕರೆ ಜಮೀನನ್ನು ಸಕ್ರಮಗೊಳಿಸಲಾಗಿರುತ್ತದೆ. ವಿವರ ನೀಡುವುದು

ಆ) ನಗರ ಪರಿಮಿತಿಯಿಂದ 5 ಕಿ ಮೀ ವ್ಯಾಪ್ತಿಯಲ್ಲಿ ಅನಧಿಕೃತ ಸಾಗುವಳಿ ಮಾಡಿಕೊಂಡಿರುವ ಜಮೀನುಗಳ ಸಕ್ರಮದ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ವಿವರ ನೀಡುವುದು

ಇ) ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಗರ ಪರಿಮಿತಿಯಿಂದ 5 ಕಿ ಮೀ ವ್ಯಾಪ್ತಿಯಲ್ಲಿ ಜಮೀನಿನ ಅನಧಿಕೃತ ಸಾಗುವಳಿ ಮಾಡುತ್ತಿರುವ ಬಗರ್ ಹುಕುಂ ಜಮೀನಿನ ವಿವರ ಎಷ್ಟು

ಈ) ಗೋಮಾಳ ಜಮೀನು ಸಕ್ರಮಗೊಳಿಸಲು ಸರ್ಕಾರ ಯಾವ ನಿಲುವು ತಳೆದಿದೆ ವಿವರ ನೀಡುವುದು?

ಶ್ರೀ ಹೆಚ್ ಸಿ ಶ್ರೀಕಂರಯ್ಯ (ಕಂದಾಯ ಸಚಿವರು)

ಅ) ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದಲ್ಲಿ ಭೂ ಕಂದಾಯ ಕಾಯ್ದೆ ಪ್ರಕರಣ 94–ಎ ಮತ್ತು 94–ಬಿ ಪ್ರಕಾರ ನಮೂನೆ 50 ಮತ್ತು 53ರಲ್ಲಿ ಅನಧಿಕೃತ ಸಾಗುವಳಿ ಸಕ್ರಮ ಕೋರಿ ಒಟ್ಟು 14139 ಅರ್ಜಿಗಳು ಬಂದಿರುತ್ತದೆ ಈ ಪೈಕಿ ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದ 787 ಜನರಿಗೆ 1714 20 ಎಕರೆ ಜಮೀನು ಸಕ್ರಮಕ್ಕೆ ಆದೇಶವಾಗಿದ್ದು 314 ಜನರಿಗೆ ಸಾಗುವಳಿ ಚೀಟಿ ನೀಡಲಾಗಿದೆ